ನನಗೆ ಬಂದಿರುವ ವರದಿಯನ್ನು ತಮ್ಮ ಮುಂದಿಟ್ಟಿದ್ದೇನೆ. ಸಭೆಯ ಮುಂದೆ ಇಟ್ಟಿದ್ದೇನೆ. If any wrong information has been given by any officer, ಅದರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂದುಮುಂದು ನೋಡುವುದಿಲ್ಲ. ಆ ಚಿತಾಗಾರವು ಯಾವ ಹಂತದಲ್ಲಿ ನಿರ್ಮಾಣವಾಗುತ್ತಿದೆ ಎಂಬುದನ್ನು ನಾನಿನ್ನು ನೋಡಲು ಸಮಯ ಸಿಗದೆ ಸಾಧ್ಯವಾಗಿಲ್ಲ.

ಶ್ರೀ ಎನ್. ಸುರೇಶ್ ಕುಮಾರ್ : ನಾನು ಉನ್ನತ ಸಮಿತಿಯ ಬಗ್ಗೆ ಹೇಳಿದ್ದೇನೆ ಮತ್ತು ಮಾಲಿನ್ಯ ಮಂಡಳಿಯಿಂದ ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರ?

ಶ್ರೀ ಹೆಚ್.ಡಿ. ದೇವೇಗೌಡ : ಅಲ್ಲಿ ಈಗ ಹೊರಸೂಸುವ ವಾಸನೆಯನ್ನು ನಿವಾರಿಸಲು ಆಯಿಲ್ ಫಿಲ್ಟರ್‌ಗಳನ್ನು ಪ್ರಯೋಗಿಕವಾಗಿ ಅಳವಡಿಸಲಾಗಿದೆ. ಆ ವ್ಯವಸ್ಥೆಯು ಯಶಸ್ವಿಯಾದರೆ ಎಲ್ಲಾ ಚಿತಾಗಾರಗಳಿಗೂ ಇದನ್ನು ಜೋಡಿಸುತ್ತೇವೆಂದು ವರದಿ ಇದೆ. ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಾಗ ನಿಮ್ಮನ್ನು ಸಹ ಕೂರಿಸಿಕೊಂಡು ಚರ್ಚೆ ಮಾಡುತ್ತೇವೆ. ತಾವು ಉನ್ನತ ಸಮಿತಿಯ ಬಗ್ಗೆ ಹೇಳಿದ್ದೀರಿ ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಶ್ರೀನಿವಾಸ್ : ಒಂದು ವಾಹನದಲ್ಲಿ ಹೊಗೆ ಹೋಗುತ್ತಿದ್ದರೆ ಸಾವಿರ ರೂಪಾಯಿ ದಂಡ ವಿಧಿಸುತ್ತೀರಿ, ಆದರೆ ಇಲ್ಲಿ ಏನು ಆಗುವುದಿಲ್ಲವೆ?

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳ ಹಂಚಿಕೆ

11 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಕಳೆದ ಐದು ವರ್ಷಗಳಲ್ಲಿ ಎಷ್ಟು ಜನ ಮಧ್ಯಮ ವರ್ಗದ ಮತ್ತು ಕೆಳವರ್ಗದ ಜನರಿಗೆ ನಿವೇಶನಗಳನ್ನು ಹಂಚಿದ್ದಾರೆ?

ಆ) ನಿವೇಶನಗಳನ್ನು ಹಂಚಲು ಕಳೆದ ಐದು ವರ್ಷಗಳಿಂದ ಬೆಂಗಳೂರಿನ ಸುತ್ತಮುತ್ತ ಎಷ್ಟು ಎಕರೆ ಜಮೀನನ್ನು ಈ ಪ್ರಾಧಿಕಾರದವರು ವಶಕ್ಕೆ ತೆಗೆದುಕೊಂಡಿದ್ದಾರೆ?

ಇ) ಈಗಾಗಲೇ ಸೈಟು ನೀಡಿ, ಆ ಫಲಾನುಭವಿಗಳಿಂದ ಹಣ ಪಡೆದು ಸೈಟುಗಳನ್ನು ಹಂಚದೇ ಇರುವ ಸಂಖ್ಯೆ ಎಷ್ಟು?

ಈ) ಈವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸೈಟುಗಳನ್ನು ಕೇಳಿ ಅರ್ಜಿ ಹಾಕಿರುವ ಫಲಾನುಭವಿಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ನಿವೇಶನಗಳ ಹಂಚಿಕೆ) ನಿಯಮಾವಳಿಗಳು 1994ರ ಪ್ರಕಾರ ವಿವಿಧ ವರ್ಗದ ಅರ್ಜಿದಾರರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಯಾವುದೇ ಯೋಜನೆಯಲ್ಲಿ ಪ್ರತಿಶತ 30ರಷ್ಟು ನಿವೇಶನ ಪ್ರದೇಶವನ್ನು ರೂ. 6,000ಕ್ಕಿಂತ ಕಡಿಮೆ ವರಮಾನವಿರುವ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಹಂಚಿಕೆ ಮಾಡಲು ನಿಯಮಗಳಲ್ಲಿ ಅವಕಾಶವಿರುತ್ತದೆ. ಒಟ್ಟು 5355 ನಿವೇಶನಗಳಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ 2212 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

ಆ) ಒಟ್ಟು 752 ಎಕರೆ 17 ಗುಂಟೆ ಜಮೀನನ್ನು ಪ್ರಾಧಿಕಾರದ ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿದೆ.

ಇ) ನ್ಯಾಯಾಲಯವು ತಡೆಯಾಜ್ಞೆ ನೀಡಿರುವ 428 ಪ್ರಕರಣಗಳಲ್ಲಿ ಹಂಚಿಕೆ ಪತ್ರ ಸ್ವಾಧೀನ ಪತ್ರಗಳನ್ನು ನೀಡಲಾಗಿರುವುದಿಲ್ಲ. ನ್ಯಾಯಾಲಯದಿಂದ ತಡೆಯಾಜ್ಞೆಗಳನ್ನು ತೆರವುಗೊಳಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕ್ರಮ ಕೈಗೊಳ್ಳಲಾಗುತ್ತಿದೆ. ಸಾಧ್ಯವಾದ ಸಂದರ್ಭದಲ್ಲಿ ಬದಲಿ ನಿವೇಶನಗಳನ್ನು ಅದೇ ಬಡಾವಣೆಯಲ್ಲಾಗಲಿ ಅಥವಾ ಹೊಸದಾಗಿ ನಿರ್ಮಿಸಲಾಗುತ್ತಿರುವ ಬಡಾವಣೆಯಲ್ಲಾಗಲೀ ಒದಗಿಸಲಾಗುವುದು.

ಈ) 86,988

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾದ ವಿಷಯ. ಮಧ್ಯಮ ವರ್ಗದ ಮತ್ತು ಕೆಳವರ್ಗದ ಜನರಿಗೆ ಎಷ್ಟು ನಿವೇಶನಗಳನ್ನು ಹಂಚಿದ್ದೀರಿ ಮತ್ತು ಅದಕ್ಕಾಗಿ ಎಷ್ಟು ಅರ್ಜಿಗಳು ಬಂದಿವೆ ಎಂದು ಕೇಳಿದ್ದೇನೆ. ತಾವು ಅದಕ್ಕೆ 5355 ನಿವೇಶನಗಳಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ 2212 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದ್ದೀರಿ ಮತ್ತು 86,988 ಜನರಿಂದ ಅರ್ಜಿಗಳು ಸೈಟ್ಗಾಗಿ ಬಂದಿವೆ. ಅವರಿಗೆ ಸೈಟುಗಳನ್ನು ಹಂಚಬೇಕಾಗಿದೆ ಎಂದು ತಿಳಿಸಿದ್ದೀರಿ. ಅಧ್ಯಕ್ಷರೆ, ಈ 86,988 ಜನರು 4-5 ವರ್ಷಗಳ ಹಿಂದೆಯೇ ಸೈಟನ್ನು ಕೋರಿ ಹಣವನ್ನು ಕೊಟ್ಟಿದ್ದಾರೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಿಮಗೆ ಜಾಗದ ಕೊರತೆ ಇರುವುದರಿಂದ ಮತ್ತು ಬೆಂಗಳೂರು ಅಭಿವೃದ್ಧಿಯಾಗುತ್ತಿರುವುದರಿಂದ ಅವರೆಲ್ಲರಿಗೆ ನಿವೇಶನಗಳನ್ನು ಇಲ್ಲವೆ ಮನೆಯನ್ನು ಕೊಡಬೇಕು ಎನ್ನುವುದಾದರೆ ಗ್ರೂಪ್ ಹೌಸಿಂಗ್ ಸ್ಕೀಮ್ಮನ್ನೇನಾದರೂ ಜಾರಿಗೆ ತಂದು ಕೊಡಲು ಸಾಧ್ಯವಿದೆಯೇ? ಎರಡನೆಯದು ಈ ಹಿಂದೆ ತಮ್ಮ ಸರ್ಕಾರವೆ ಅಧಿಕಾರದಲ್ಲಿದ್ದಂಥ ಕಾಲದಲ್ಲ ಒಳ್ಳೆಯ ಕೆಲಸ ಮಾಡಿದ್ದೀರಿ. ಅದೇನೆಂದರೆ ಯಾಱ ರೈತರು ತಮಗೆ ಜಮೀನನ್ನು ಕೊಟ್ಟರುತ್ತಾರೊ ಅಂಥವರಿಗೆ ಒಂದು ಎಕರೆ ಜಮೀನನ್ನು ಕೊಟ್ಟಿರುವವರಿಗೆ 60x40 ವಿಸ್ತೀರ್ಣದ ಸೈಟನ್ನು ಕಡಿಮೆ ದರದಲ್ಲಿ ಕೊಡತಕ್ಕ ವ್ಯವಸ್ಥೆ ಇತ್ತು. ಅದನ್ನು ಪುನರ್ ಜಾರಿಗೆ ತರುತ್ತೀರಾ? ಇವತ್ತು ಬಿಎನಲ್ಲಿ ಜಮೀನು ಇಲ್ಲದಿರತಕ್ಕ ಸಮಯದಲ್ಲಿ ಹೌಸಿಂಗ್ ಕೋ-ಆಪರೇಟೀವ್ ಸೊಸೈಟಿಯವರು ಬೇಕಾದಷ್ಟು ಜಮೀನುಗಳನ್ನು ತೆಗೆದುಕೊಂಡು ಲೂಟಿ ಮಾಡುತ್ತಿರತಕ್ಕದ್ದು ನಡೆಯುತ್ತಿದೆ. ಅದನ್ನು ತಡೆಗಟ್ಟುತ್ತೀರಾ? ನನ್ನ ಈ ಪ್ರಶ್ನಗಳಿಗೆ ನೇರವಾಗಿ ಉತ್ತರವನ್ನು ಒದಗಿಸಿದರೆ ಮುಂದಿನ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಅಧ್ಯಕ್ಷರೆ, ಗ್ರೂಪ್ ಹೌಸಿಂಗ್ ಸ್ಕೀಮ್ನ್ನು ಜಾರಿಗೆ ತರುವ ಬಗ್ಗೆ ಕೇಳಿದ್ದಾರೆ, ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಹಿಂದೆ ಒಂದು ಎಕರೆ ಜಮೀನನ್ನು ಕೊಟ್ಟವರಿಗೆ ಸೈಟನ್ನು ಕಡಿಮೆ ದರದಲ್ಲಿ ಕೊಡುವ ಭಗ್ಗೆ ನನಗೇನು ಅಷ್ಟಾಗಿ ತಿಳಿದಿಲ್ಲ. ಅದರ ಬಗ್ಗೆ ಈ ಸಭೆಯ ಮೂಲಕ ನನ್ನ ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ಈ ಹಿಂದೆ ಏನು ನಿರ್ಣಯವಾಗಿದೆ, ಈ ಮಧ್ಯ 5 ವರ್ಷಗಳ ಆಡಳಿತದ ಅವಧಿಯಲ್ಲಿ ಏನು ನಿರ್ಣಯವನ್ನು ಮಾಡಿದ್ದಾರೆ ಎಂಬುದನ್ನು ನೋಡಬೇಕಾದರೆ, ಅದನ್ನು ನೋಡುತ್ತೇನೆಂದು ಆಶ್ವಾಸನೆಯನ್ನು ಕೊಡುತ್ತೇನೆ. ಕೊನೆಯದಾಗಿ ಹೌಸಿಂಗ್ ಸೊಸೈಟಿಗಳ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ಸುಪ್ರೀಂ ಕೋರ್ಟ್ ಮೊನ್ನೆ ತಾನೆ ಒಂದು ನಿರ್ಣಯವನ್ನು ಕೊಟ್ಟಿದೆ. ಅದರಲ್ಲಿ ಇಂಥ ಕೋ-ಆಪರೇಟೀವ್ ಸೊಸೈಟಿಗಳು ವಹಿಸಿಕೊಂಡಿರುವ ಜಮೀನನ್ನು ರದ್ದುಮಾಡಬೇಕೆಂದು ಹೇಳಿದೆ. ಮತ್ತು ವಾಪಸ್ ಅವರಿಂದ ಪಡೆಯಬೇಕೆಂದು ಹೇಳಿದೆ. ಸುಪ್ರೀಂ ಕೋರ್ಟಿನ ನಿರ್ಣಯದ ಪ್ರತಿ ನನಗಿನ್ನು ಬಂದಿಲ್ಲ. ಅದು ಬಂದಮೇಲೆ ಅಲ್ಲಿರುವ ಸಾಧಕಭಾದಕಗಳನ್ನು ನೋಡಬೇಕಾಗುತ್ತದೆ. ಕೆಲವು ಕಡೆ 10-15 ವರ್ಷಗಳ ಹಿಂದೆಯೇ ಸೈಟನ್ನು ವಿತರಣೆ ಮಾಡಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಆದ್ದರಿಂದ ಸುಪ್ರೀಂ ಕೋರ್ಟಿನ ತೀರ್ಮಾನವೇನಿದೆ

ಅದರ ಬಗ್ಗೆ ಪೂರ್ಣವಾದ ಅಧ್ಯಯನ ಮಾಡಬೇಕು. ಅನಂತರ ಮಾತ್ರ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಉತ್ತರದಲ್ಲಿ ಕೊನೆಯ ಪ್ರಶ್ನೆಗೆ 86,988 ಅರ್ಜಿಗಳು ನಿವೇಶನಗಳನ್ನು ಕೋರಿ ಬಂದಿದೆ ಎಂದು ಹೇಳಿದ್ದಾರೆ. ಇವರುಗಳೆಲ್ಲರೂ ಹಣವನ್ನು ಕೊಟ್ಟು 4-5 ವರ್ಷಗಳಾಗಿದೆ. ಆದ್ದರಿಂದ ಅಧ್ಯಕ್ಷರ ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುವುದೇನೆಂದರೆ ಅವರುಗಳಿಗೆ ನಿವೇಶನಗಳನ್ನು ಕೊಡುತ್ತೀರಾ? ಕೊಡುವುದಾದರೆ ಯಾವ ಅವಧಿಯಲ್ಲಿ ಕೊಡುತ್ತೀರಿ, 86,988 ಜನರಿಂದ ಬಂದಿರುವ ಹಣ ಕೊಟ್ಟಾಂತರ ರೂಪಾಯಿಗಳಾಗುತ್ತದೆ. ನಿವೇಶನವನ್ನು ಕೊಡಲಾಗದಿದ್ದರೆ ಅವರಿಗೆ ಹಣವನ್ನು ವಾಪಸ್ ಕೊಡತಕ್ಕ ವ್ಯವಸ್ಥೆ ಮಾಡುತ್ತೀರಾ? ಇಲ್ಲದಿದ್ದರೆ ಅವರಿಗೆ ಏನು ಪರಿಹಾರ ಕೊಡುತ್ತೀರಿ ಏಕೆಂದರೆ ತಮ್ಮ ಜಾಹೀರಾತಿನ ಅನ್ವಯದೆ ಅವರು ಹಣವನ್ನು ಕಟ್ಟಿರತಕ್ಕದ್ದು. ಆ 86,988 ಜನರು ಕಟ್ಟಿರುವ ಹಣವು ಎಷ್ಟು ಕೋಟಿ ಇದೆ? ನಿವೇಶನವನ್ನು ಯಾವಾಗ ಕೊಡುತ್ತೀರಿ? ಇಲ್ಲದಿದ್ದರೆ ಹಣವನ್ನು ಎಂದು ವಾಪಸ್ ಕೊಡುತ್ತೀರಿ ಇಲ್ಲದಿದ್ದರೆ ಬಿಡ್‌ಎ ಒಂದು ಬಿಳಿ ಆನೆಯಾಗಿದೆ, ಅದನ್ನು ಮುಚ್ಚಿಬಿಡುತ್ತೀರೋ?

ಶ್ರೀ ಎಂ. ಶ್ರೀನಿವಾಸ್ : ನನಗೆ ತಿಳಿದಮಟ್ಟಿಗೆ 86 ಸಾವಿರ ಅರ್ಜಿದಾರರು ಕೊಟ್ಟಿರುವ ಕೋಟ್ಯಾಂತರ ಹಣವೆಲ್ಲಾ ಖರ್ಚಾಗಿದೆ. ಬೇರೆ ಕಡೆಯಿಂದ ಸಾಲವನ್ನು ತರುತ್ತಾರೆಂದು ಹೇಳುತ್ತಿದ್ದಾರೆ. ಅರ್ಜಿದಾರರಿಗೆ ಯಾವ ರೀತಿಯಿಂದ ಹಣವನ್ನು ವಾಪಸ್ ಕೊಡುತ್ತೀರಿ? ಅವರ ಹಣವೆಲ್ಲ ಎಲ್ಲಿ ಖರ್ಚಾಗಿದೆ?

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಅರ್ಜಿದಾರರು ಎಷ್ಟು ಹಣವನ್ನು ಕಟ್ಟಿದ್ದಾರೆ, ಅದರ ಒಟ್ಟು ಹಣವೆಷ್ಟಿದೆ ಎನ್ನುವ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ, ಬೇಕಾದರೆ ಅದನ್ನು ತರಿಸಿ ಒದಗಿಸುತ್ತೇನೆ. ನಾನು ಒಂದೇ ಒಂದು ಶಬ್ದ ಹೇಳುತ್ತೇನೆ. ಒಂದು ಅರ್ಜಿದಾರರಿಗೆ ನಿವೇಶನವನ್ನು ಕೊಡಬೇಕು, ಇಲ್ಲದಿದ್ದರೆ ಅವರಿಗೆ ಹಣವನ್ನು ವಾಪಸ್ ಕೊಡಬೇಕು. ಇಲ್ಲದಿದ್ದರೆ ಗ್ರೂಪ್ ಹೌಸಿಂಗ್ ಸ್ಕೀಮ್ನ ಮೂಲಕ ಅವರುಗಳಿಗೆ ವಸತಿ ಸೌಲಭ್ಯವನ್ನು ದೊರಕಿಸಿಕೊಡುವ ಬಗ್ಗೆ ನೋಡಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಶೀಘ್ರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ ನಾನು ಹೆಚ್ಚು ಪ್ರಶ್ನೆಯನ್ನೇನೂ ಕೇಳುತ್ತಿಲ್ಲ, ಸುಮಾರು 86,988 ಜನ ಅರ್ಜಿದಾರರಿದ್ದಾರೆ, ಬಹಳ ಜನರು 4-5 ವರ್ಷದಿಂದಲೆ ಅರ್ಜಿಯನ್ನು ಹಾಕಿದ್ದಾರೆ. ಇವರುಗಳಿಗೆ ಗ್ರೂಪ್ ಹೌಸಿಂಗ್ ಸ್ಕೀಮ್ನ ಮೂಲಕವೋ ಅಥವಾ ಮತ್ತಾವುದಾದರೂ ರೂಪದ ಮೂಲಕವಾದರೂ ನಿವೇಶನವನ್ನು ಒದಗಿಸುತ್ತೇವೆಂದು ನಿರ್ದಿಷ್ಟವಾಗಿ ಹೇಳಬೇಕು. ಇಲ್ಲದಿದ್ದರೆ ಹಣವನ್ನು ವಾಪಸ್ ಕೊಡುತ್ತೇವೆ, ಇನ್ನು ಮುಂದೆ ಬಿಡ್‌ಎ ನಿಂದ ಯಾವುದೆ ಅರ್ಜಿಯನ್ನು ಕರೆಯುವುದಿಲ್ಲ ಕರೆಯಲು ಸಾಧ್ಯವೂ ಇಲ್ಲ ಎನ್ನುವ ಬಗ್ಗೆ ಸ್ಪಷ್ಟವಾಗಿ ಈ ರಾಜ್ಯದ ಜನರಿಗೆ ಹೇಳಬೇಕು.

ಅಧ್ಯಕ್ಷರು : ಅವರು ಅದರ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅರ್ಜಿದಾರರಿಗೆ ಹಣವನ್ನಾದರೂ ಹಿಂದಿರುಗಿಸಬೇಕು ಇಲ್ಲದಿದ್ದರೆ ನಿವೇಶವನ್ನಾದರೂ ಕೊಡಬೇಕಾಗುತ್ತದೆಂದು ಅಷ್ಟಕ್ಕೆ ಬದ್ಧವಾಗಿ ಅವರು ಹೇಳಿದ್ದಾರೆ. ನೀವು ಅವರಿಗೆ ಅವಧಿಯನ್ನು ಹೇಳಿ ಎಂದು ಕೇಳುತ್ತಿದ್ದೀರಿ. ಅವರು ಇನ್ನು ಹೊಸದಾಗಿ ಬಂದಿದ್ದಾರೆ. ಅವರಿಗೆ ಸ್ವಲ್ಪ ಸಮಯ ಕೊಡೋಣ.

ಶ್ರೀ ಹೆಚ್.ಡಿ. ದೇವೇಗೌಡ : 86,988 ಅರ್ಜಿದಾರರಿಂದ 26 ಕೋಟಿ ರೂಪಾಯಿಗಳು ಡಿಪಾಜಿಟ್ ಆಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದನ್ನು ಯಾವಾಗ ಕೊಡುತ್ತೀರಿ? ಇಲ್ಲದಿದ್ದರೆ ಬಡ್ಡಿಯನ್ನಾದರೂ ಕೊಡಬೇಕು.

ಅಧ್ಯಕ್ಷರು : ನೀವು ಹಳ್ಳಿಗಳಿಗೆ ಹೋದಾಗ ಬಡ್ಡಿಯನ್ನು ಬಿಡಿ ಎಂದು ಹೇಳುತ್ತೀರಿ ಇಲ್ಲಿ ಕೊಡಿ ಎಂದು ಹೇಳುತ್ತೀರಲ್ಲ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನೂ ಸಹ ಬಡವರ ಮಗ. ನಾನು ಶ್ರೀಮಂತರ ಬಗ್ಗೆ ಮಾತನಾಡುತ್ತಿಲ್ಲ. ಸಾಲವನ್ನು ತಂದು, ಮೈಮೇಲಿನ ಒಡವೆಗಳನ್ನು ಮಾರಿ ನಿವೇಶನಕ್ಕಾಗಿ ಹಣವನ್ನು ಕೊಟ್ಟಿದ್ದಾರೆ. ಇದು ಹಗುರವಾದ ಪ್ರಶ್ನೆಯಿಲ್ಲ.

ಅಧ್ಯಕ್ಷರು : ಸನ್ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಪ್ರಶ್ನೆಯನ್ನು ಕೇಳಲು ಅನೇಕ ಅವಕಾಶಗಳು ದೊರೆಯುತ್ತವೆ. ಆದ್ದರಿಂದ ದಯಮಾಡಿ ಮಾನ್ಯ ಚಿತ್ತರಂಜನ್‌ರವರಿಗೆ ಪ್ರಶ್ನೆಯನ್ನು ಕೇಳಲು ಅವಕಾಶ ಮಾಡಿಕೊಡಿ.

ಶ್ರೀ ಎಂ. ಶ್ರೀನಿವಾಸ್ : ಅರ್ಜಿದಾರರಿಂದ ಬಂದಿರುವ 26 ಕೋಟಿ ಹಣ ಇದೆಯೇ? ನನಗೆ ತಿಳಿದಮಟ್ಟಿಗೆ 7 ಕೋಟಿ ಸಾಲಕ್ಕಾಗಿ ಕೆನರಾಬ್ಯಾಂಕ್‌ಗೆ ಅರ್ಜಿಯನ್ನು ಹಾಕಿದ್ದಾರೆ.

(ಗೊಂದಲ)

ಭಟ್ಕಳ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಲಯದಲ್ಲಿ ದಾಖಲಾಗಿರುವ ಕ್ರಿಮಿನಲ್ ಮೊಕದ್ದಮೆಗಳು

334 - ಡಾ॥ ಯು. ಚಿತ್ತರಂಜನ್ (ಭಟ್ಕಳ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1993-94ರಲ್ಲಿ ಭಟ್ಕಳದಲ್ಲಿ ನಡೆದ ಕೋಮುಗಲಭೆ ಸಂಬಂಧ ಭಟ್ಕಳದ ಜೆ.ಎಂ.ಎಸ್.ಸಿ. ನ್ಯಾಯಾಲಯದಲ್ಲಿ ಮತ್ತು ಕಾರವಾರದ ಸೆಶೆನ್ಸ್ ನ್ಯಾಯಾಲಯದಲ್ಲಿ ಎಷ್ಟು ವ್ಯಕ್ತಿಗಳ ಮೇಲೆ ಎಷ್ಟು ಕ್ರಿಮಿನಲ್ ಕೇಸುಗಳನ್ನು ಹಾಕಲಾಗಿದೆ?*

ಆ) *ಈಗ ಕೋಮು ಸೌಹಾರ್ದತೆ ಇರುವುದರಿಂದ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

1993-94ರಲ್ಲಿ ಭಟ್ಕಳದಲ್ಲಿ ನಡೆದ ಕೋಮು ಗಲಭೆಯ ಪ್ರಯುಕ್ತ ಭಟ್ಕಳದ ಜೆ.ಎಂ.ಎಫ್ಸಿ ನ್ಯಾಯಾಲಯದಲ್ಲಿ 225 ವ್ಯಕ್ತಿಗಳ ಮೇಲೆ 31 ಪ್ರಕರಣಗಳನ್ನು ಹಾಗೂ ಕಾರವಾರದ ಸೆಶೆನ್ಸ್ ನ್ಯಾಯಾಲಯದಲ್ಲಿ 307 ವ್ಯಕ್ತಿಗಳ ಮೇಲೆ 33 ಕ್ರಿಮಿನಲ್ ಕೇಸ್ಗಳನ್ನು ಹಾಕಲಾಗಿದೆ.

ಆ)1.ಎರಡೂ ಕೋಮಿನ ಹಬ್ಬಗಳು ನಡೆಯುವಾಗ ಹೆಚ್ಚುವರಿ ಪೋಲೀಸ್ ಪಡೆ ಹಾಗೂ ಅಧಿಕಾರಿಗಳನ್ನು ರಾತ್ರಿ ಹಗಲು ಬಂದೋಬಸ್ತ ಮಾಡಲಾಗುತ್ತದೆ. ಅಲ್ಲದೇ ಉನ್ನತ ಮಟ್ಟದ ಅಧಿಕಾರಿಗಳೇ ಭಟ್ಕಳದಲ್ಲಿ ವಾಸ್ತವ್ಯ ಮಾಡಿ ಬಂದೋಬಸ್ತ್ ಮೇಲ್ವಿಚಾರಣೆ ನೋಡಿಕೊಳ್ಳುವಂತೆ ವ್ಯವಸ್ಥೆ ಮಾಡಲಾಗಿದೆ.